**ದಿನಾಂಕಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ. ಬಿ.ಆರ್.ಡಿ. ವಕೀಲರಿಂದಃ**

ಚಿಂತಾಮಣಿ ಬೆಂಗಳಾೂರುರಸ್ತೆ ತಾಲ್ಲೂಕು ರಸ್ತೆ ನಡುವೆ ಒಂದೇ ಒಂದು ಹಂಪ್ ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ಸದರಿ ಹಂಪನ್ನು ಹತ್ತಿ ಇಳಿದ ನಂತರ ಮತ್ತೊಂದು ರಾಘವೇಂದ್ರ ಜರಾಕ್ಸ್ ಅಂಗಡಿ ಮುಂಭಾಗ ಇರುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಹಂಪ್ ರಾಘವೆಂದ್ರ ಜರಾಕ್ಸ್ ಅಂಗಡಿ ನಡುವೆ ಒಂದು ರಸ್ತೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಂತರ ಬಲ ಬದಿಯಲ್ಲಿ ತಾಲೂಕು ಕಚೇರಿಗೆ ಹೊಗಲು ರಸ್ತೆ ಇದೆ ಎಂದರೆ ಹೌದು ಎನ್ನುತ್ತಾರೆ. ರಾಘವೇಂದ್ರ ಸ್ವಾಮಿ ದೇವಸ್ಥಾನ ನಂತರ ಮತ್ತೊಂದು ಹಂಪ್ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಂತರ ಬಲ ಬದಿಗೆ ರಸ್ತೆ ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ಸದರಿ ಹಂಪಿನ ಹತ್ತಿರ ದೊಡ್ಡ ದೊಡ್ಡ ವಾಹನಗಳು ಬಂದಾಗ ಸದರಿ ಹಂಪನ್ನು ದಾಟಿದ ತಕ್ಷಣ ಜೋರಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಹೋಗಬಹುದು ಎನ್ನುತ್ತಾರೆ. ವಾಹನಗಳು ಸದರಿ ಹಂಪನ್ನು ದಾಟಿದಾಗ ನಿಧಾನ ರೀತಿಯಲ್ಲಿ ಚಲಿಸುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಮನಿಸಿಪಲ್ ಕಚೇರಿ ಹತ್ತಿರ 1 ಹಂಪು ನಂತರ ಮತೊಿತಸಂದು ಹಂಪು ಅದರ ನಂತರ ರಾಘವೇಂದ್ಟ ಅಂಗಡಿಯ ಹತ್ತಿರ ಇದ್ದು ವಾಹನಗಳು ನಿಧಾನವಾಗಿ ಚಲಿಸಬೇಕು ಎಂದರೆ ಹೌದು ಎನ್ನುತ್ತಾರೆ. ರಾಘವೇಂದ್ರ ದೇವಸ್ಥಾನ ನಂತರ ಸಬ್ ರೊಡ್ ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ದಿಃ 15.08.2019 ರಂದು ಯಾವ ದಿಕ್ಕಿನಿಂದ ನೀವು ಬಂದಿರುತ್ತೀರಾ ಎಂದರೆ ಸಾಕ್ಷಿ ಬೆಂಗಳೂರು ರಸ್ತೆಯ ಡಿಪೋ ಕಡೆಯಿಂದ ಚಿಂತಾಮಣಿ

ಟೌನ್ ಕಡೆಗೆ ಬಂದಿರುತ್ತೇನೆ ಎನ್ನುತ್ತಾರೆ. ಸದರಿ ರಸ್ತೆಯಿಂದ ನೀವು ದೇವಸ್ಥಾನ ಹತ್ತಿರ ಬಂದಾಗ ದೇವರನ್ನು ನೋಡಿ ಕೈ ಮುಗಿದು ನಂತರ ಎಡ ಭಾಗದಲ್ಲಿ ಒಂದು ಲಾರಿ ನಿಂತಿತ್ತು ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಲಾರಿಯನ್ನು ಗಮನಿಸದೇ ಜೋರಾಗಿ ಬಂದು ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಡಿಕ್ಕಿ ಹೋಡೇದಿರುತ್ತೀರಿ ಎಂದರೆ ಸರಿಯಲ್ಲ. ತಾವೇ ನಿಮ್ಮ ಅಜಾಗರೂಕತೆಯಿಂದ ಬಸ್ಸಿಗೇ ಡಿಕ್ಕಿ ಹೊಡೆದು ಪರಿಹಾರ ಪಡೆಯಿಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಡು ಆರೋಪಿಯು ವಿರುದ್ಧ ಸುಳ್ಳು ಸಾಕ್ಷ್ಯನುಡಿಯುತ್ತೀದ್ದಿ ರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸ ಇದೆ.**

**Sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.